# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ

ಸಿ.ಸಿ. ನಂ-496/2015

Cw-4 Pw-4

| | |
|---|---|
| ಹೆಸರು | ಮುಸ್ತಾಕಹಮ್ಮದ |
| ತಂದೆಯ ಹೆಸರು | ದಸ್ತಗೀರಸಾಬ ನದಾಫ್ |
| ವಯಸ್ಸು | 46 |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಜಮಖಂಡಿ |

ದಿನಾಂಕಃ 16-12-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ದಿನಾಂಕ 13-01-2014 ರಂದು ಅಪ್ಜಲ ಕೂರೇಸಿ ಎಂಬುವವರು ತೋದಲಬಾಗಿ ಗ್ರಾಮದಲ್ಲಿ ಟ್ರಾಕ್ಟರ ಅಪಘಾತದಲ್ಲಿ ಮರಣ ಹೊಂದಿದ್ದು , ಕಾರಣ ಸರ್ಕಾರಿ ಆಸ್ಪತ್ರೆಯಲ್ಲಿ ಅವರ ಶವ ಪಂಚನಾಮೆಯನ್ನು 08-30 ರಿಂದ 08-45 ವರೆಗೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡು ಒಂದು ಪೋಟೋವನ್ನು ತೆಗೆದಿರುತ್ತಾರೆ .

ಸದರಿ ಶವ ಪಂಚನಾಮೆಯನ್ನು ಅದನ್ನು ನಿಪಿ-3 ಎಂದು ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ- 3 ಎ ಎಂದು , ಪೋಟೋವನ್ನು ನಿಪಿ- 4 ಎಂದು ಗುರುತಿಸಲಾಯಿತು .

ಪಾಟೀ ಸವಾಲುಃ ಶ್ರೀ ಎಸ್ ಬಿ ಎಚ್ 1 ಮತ್ತು 2 ನೇ ಆರೋಪಿ ಪರ ವಕೀಲರಿಂದಃ-

ನನ್ನ ಸ್ವಂತ ಊರು ಜಮಖಂಡಿ . ಮಯತ ಅಪ್ಜಲ ಕೂರೇಸಿ ನನಗೆ ಸಂಬಂದಿಕ ಇರುವದಿಲ್ಲ . ಆತನ ಊರಿನವರು ನನಗೆ ಕರೆಯಿಸಿ ಒಂದು ದಾಖಲೆಗೆ ಸರ್ಕಾರಿ ಅಸ್ಪತ್ರೆಯಲ್ಲಿ ಸಹಿ ಮಾಡಲು ಕರೆಸಿರುತ್ತಾರೆ . ಯಾವ ಸಂಬಂದ ಕರೆಸಿದ ಬಗ್ಗೆ ನನಗೆ ಗೊತ್ತಿಲ್ಲ . ಸದರಿಯವರು ಟ್ರಾಕ್ಟರ ಪಲ್ಟಿ ಆಗಿದ್ದರಿಂದ ಮರಣ ಹೊಂದಿರುತ್ತಾರೆ ಎಂದು ನಿಂಬರಗಿ ಪಿ ಎಸ್ ಐ ರವರು ನನಗೆ ಹೇಳಿರುತ್ತಾರೆ . ಅವರು ಹೇಳಿದ್ದರಿಂದ ಸದರಿ ವಿಚಾರ ನನಗೆ ಗೊತ್ತಾಗಿರುತ್ತದೆ . ವಯಕ್ತಿಕವಾಗಿ ಅಪಘಾತವಾದ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ . ಶವ ಪಂಚನಾಮೆಯಲ್ಲಿ ಬರೆದ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ . ನನ್ನನ್ನು ಆಸ್ಪತ್ರೆಗೆ ಕರೆದ ಬಳಿಕ ನಿಪಿ- 4 ರಂತೆ ಪೋಲಿಸರು ಪೋಟೋವನ್ನು ತೆಗೆಸಿರುತ್ತಾರೆ . ನಂತರ ಶವ ಪಂಚನಾಮೆ ತಯಾರು ಮಾಡಿದ ಬಳಿಕ ಪೋಲಿಸ

ಕೋರಿಕೆಯ ಮೇಲೆ ಶವ ಪಂಚನಾಮೆ ಮಾಡಿ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ . 2014 ನೇ ಸಾಲಿನಲ್ಲಿ ಅಪಘಾತವಾಗಿರುತ್ತದೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಪೋಲಿಸರು ಕೋರಿಕೆಯ ಮೇರೆಗೆ ಸಹಿ ಮಾಡಿದ ಕಾರಣ ಅವರ ಮಾತು ಕೇಳಿ ಈ ದಿನ ನ್ಯಾಯಾಲಯದ ಮುಂದೆ ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಖೋಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಕೊರೇಸಿ ಇತನು ಟ್ರ್ಯಾಕ್ಟರ ಅಪಘಾತದಲ್ಲಿ ಮರಣ ಹೊಂದಿರುತ್ತಾನೆ ಎಂದು ಖೊಟ್ಟಿಯಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ .

ಮರು ವಿಚಾರಣೆ ಃ- ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಹಾಗೂ ಜೆಎಮ್ ಎಫ್ ಸಿ ಜಮಖಂಡಿ.